ಸಿಸಿ ನಂ. 160/2023 ಪಿಡಬ್ಲೂ :2

ದಿನಾಂಕಃ 19-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿಯ ಪರವಾಗಿಃ ಶ್ರೀ ವೈ ಆರ್ ಎಮ್ ವಕೀಲರಿಂದಃ**

3. ಈ ಪ್ರಕರಣದಲ್ಲಿ ಸಾಲ ನೀಡಿದ್ದಾರೆಂದು ಹೇಳುವ ದಿನಾಂಕದಂದ್ದು ನಾನು ಫಿರ್ಯಾದು ಬ್ಯಾಂಕಿನ ಶಾಖಾ ವ್ಯವಸ್ಥಾಪಕನಾಗಿರಲಿಲ್ಲ. ಆ ಸಮಯದಲ್ಲಿ ಹಳೆಯ ಮ್ಯಾನೇಜರ್ ಬಸವರಾಜ ಎಮ್ ರವರು ಇರಬಹುದು. ಸಾಲಗಾರರು ಯಾವ ಕಾರಣಕ್ಕೆ ಸಾಲ ಬೇಕೆಂದು ಅರ್ಜಿ ಸಲ್ಲಿಸಿದ್ದರು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಹೆಳೆಯ ಮ್ಯಾನೇಜರ್ ಹತ್ತಿರ ಮಾಹಿತಿ ಪಡೆದಕೊಂಡಿದ್ದೇನೆ. ಸಾಲಗಾರ ಡ್ರೈವರ್ ವೃತ್ತಿ ಮಾಡುತ್ತೇನೆಂದು ಹೇಳಿದ್ದರು. ಲಾರಿ ಡ್ರೈವರ್ ಎಂದು ಕೇಳಿದ್ದೆ. ಲಾರಿ ಅವರ ಸ್ವಂತದ್ದಾ ಅಥವಾ ಬೇರೆಯವರ ಲಾರಿಯನ್ನು ಡ್ರೈವ ಮಾಡುತ್ತಿದ್ದರು ಗೊತ್ತಿಲ್ಲ . ಲೋನ್ ಪಡೆಯುವ ಸಂದರ್ಭದಲ್ಲಿ ಹಳೆಯ ಮ್ಯಾನೇಜರ್ ಸಾಲಗಾರ ಲಾರಿಯನ್ನು ಹೊಂದಿದ್ದರೋ ಅಥವಾ ಬೇರೆಯವರ ಲಾರಿಯನ್ನು ಚಾಲನೆ ಮಾಡುತ್ತಿದ್ದರೋ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದರೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ಯಾವ ಉದ್ದೇಶಕ್ಕೆ ಸಾಲವನ್ನು ಪಡೆಯುತ್ತಾರೆ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಂಡೆ ಸಾಲವನ್ನು ಮಂಜೂರು ಮಾಡುತ್ತಾರೆ ಎಂದರೆ ಸರಿ . ಈ ಸಾಲಕ್ಕೆ ಸಂಬಂಧಪಟ್ಟಂತೆ ಸಾಲಗಾರರಿಂದ ದಾಖಲಾತಿಗಳನ್ನು ಪಡೆದುಕೊಂಡಿದ್ದೇನೆ. ಸಾಲಗಾರರಿಂದ ಅವರ ಡ್ರೈವಿಂಗ್ ಲೈಸೆನ್ಸ ಹಾಗೂ ಎಲ್ ಐ ಸಿ ಬಾಂಡ್ ಪಡೆದುಕೊಂಡಿದ್ದೇವೆ . ಈ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ . ಸಾಲಗಾರರ ವಾರ್ಷಿಕ ಆದಾಯ ನೆನಪಿಲ್ಲ, ದಾಖಲಾತಿಗಳನ್ನು ನೋಡಿ ಹೇಳಬೇಕು. ಸಾಲಗಾರರು ಯಾವ ವ್ಯಾಪಾರ ಮಾಡುತ್ತಿದ್ದರು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಅವರು ಡ್ರೈವಿಂಗ್ ಮಾಡುತ್ತೇನೆಂದು ಹೇಳಿದ್ದರು , ಕಾರಣ ಅವರ

ಡ್ರೈವಿಂಗ್ ಲೈಸೆನ್ಸನ ಪ್ರತಿಯನ್ನು ಪಡೆದುಕೊಂಡಿದ್ದೇವೆ. ಸಾಲದ ಅರ್ಜಿಯಲ್ಲಿ ಹೇಳಿದಂತೆ ಅವರ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ . ಎಷ್ಟು ವರ್ಷಗಳಿಂದ ಡ್ರೈವಿಂಗ್ ಕೆಲಸ ಮಾಡುತ್ತಿದ್ದಾರೆ ಕೇಳಿದ್ದೆ , ಆದರೆ ಈಗ ನೆನಪಿಲ್ಲ. ಸಾಲಗಾರ ಸ್ವಂತ ಲಾರಿ ಇಟ್ಟುಕೊಂಡು ಬಿಸಿನೆಸ್ ಮಾಡುತ್ತಿರಲಿಲ್ಲ ಎಂದರೆ ಗೊತ್ತಿಲ್ಲ.

4. ಬ್ಯಾಂಕಿನಲ್ಲಿ ಸಾಲದ ಅರ್ಜಿ, ಅದಕ್ಕೆ ಸಂಬಂಧಪಟ್ಟ ದಾಖಲಾತಿ, ಸಾಲದ ಅರ್ಜಿಯ ಉದ್ದೇಶ ಸರಿ ಹೊಂದದೆ ಹೋದರೆ ಸಾಲವನ್ನು ಮಂಜೂರು ಮಾಡುವುದಿಲ್ಲ ಎಂದರೆ ಸರಿ . ಸಾಲಗಾರ ಸಾಲಕ್ಕೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅವರು ಹೇಳಿದ ಪ್ರಕಾರ ಸಿಬ್ಬಂದಿಯವರು ಸಾಲದ ಅರ್ಜಿ ಬರೆದಿರುತ್ತಾರೆ. ವ್ಯಾಪಾರದ ಸಾಲಕ್ಕೆ ಅರ್ಜಿಯನ್ನು ಸಲ್ಲಿಸಿದಾಗ ಒಂದು ವಾರ –10 ದಿನಗಳಲ್ಲಿ ಸಾಲ ಮಂಜೂರು ಆಗುತ್ತದೆ. ಈ ಸಾಲದ ಅರ್ಜಿ ಮಂಜೂರು ಆಗಿದೆಯೋ ಇಲ್ಲವೋ ಆಡಳಿತ ಮಂಡಳಿಯ ಠರಾವು ನೋಡಿದರೆ ಮಾತ್ರ ಗೊತ್ತಾಗುತ್ತದೆ. ಆ ರೀತಿಯ ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಲದ ಅರ್ಜಿಯಲ್ಲಿ ಸಾಲ ಮಂಜೂರು ಆದ ಬಗ್ಗೆ ಷರಾ ಕೂಡ ಇಲ್ಲ ಸಾಕ್ಷಿ ಸಾಲದ ಅರ್ಜಿಯಲ್ಲಿ ಇರುವುದಿಲ್ಲ , ಲೋನ್ ರೆಕೆಮೆಂಡೇಷನ್ ನಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ಸಾಲ ಮಂಜೂರಾತಿ ಪ್ರತಿ ಹಾಜರುಪಡಿಸಿದ್ದೇನೆ. ಆರೋಪಿ ಸಾಲಗಾರರಲ್ಲ, ಜಾಮೀನುದಾರರು.

( ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

ಪಿಡಬ್ಲ್ಯೂ 2

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.